ಶ್ರೀ ಆರ್. ಎನ್. ನಾಯಕ್.—ಸೀನಿಯರ್ ಎ.ಪಿ.ಪಿ.ಗೆ ಬಡ್ತಿಯನ್ನು ಕೊಡುವಾಗ ಮಾನ್ಯ ಮಂತ್ರಿಗಳು ವಿವಿಧ ನಿಯಮದ ಪ್ರಕಾರ ಎಸ್.ಸಿ., ಎಸ್.ಟಿ. ಯವರಿಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆ ಎಂಬುದಾಗಿ ಹೇಳಿದ್ದಾರೆ ಬಿ.ಸಿ.ಎಂ. ನವರಿಗೂ ಕೂಡ ಇರತಕ್ಕಂತಹ ನಿಯಮಗಳನ್ನು ಬದಲಾವಣೆ ಮಾಡಿ, ಅವರಿಗೂ ಸಹ ರೋಸ್ಟರ್ ಪದ್ಧತಿಯನ್ನು ಜಾರಿಗೆ ತಂದು ಸೀನಿಯರ್ ಎ.ಪಿ.ಪಿ.ಗೆ ಬಡ್ತಿ ಕೊಡುವಾಗ ಆಳವಡಿಸುವಂತಹ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸದ್ಯಕ್ಕೆ ಆ ಯೋಚನೆ ಸರ್ಕಾರದ ಮುಂದೆ ಇಲ್ಲ.

ಸೇಡಂ ಕ್ಷೇತ್ರದಲ್ಲಿ ಜನತಾ ಗೃಹಗಳ ನಿರ್ಮಾಣ

೪೦೬ (೧೬೯) ಶ್ರೀ ನಾಗರೆಡ್ಡಿ ಲಚಮಾ ರೆಡ್ಡಿ ಪಾಟೀಲ್ (ಸೇಡಂ).—ಈ ಕಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ಸೇಡಂ ಕ್ಷೇತ್ರದಲ್ಲಿ ಸೇಡಂ ತಾಲ್ಲೂಕು ಮತ್ತು ಚಿತ್ತಾಪುರ ತಾಲ್ಲೂಕುಗಳ ಹನ್ನೊಂದು ಗ್ರಾಮಗಳಲ್ಲಿ ಬಡವರಿಗಾಗಿ ಜನತಾ ಮತ್ತು ಹುಡ್ಕೋ ಯೋಜನೆಗಳಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು ?

ಆ) ೧೯೭೮–೭೯ ರಿಂದ ೧೯೮೨–೮೩ರವರೆಗೆ ಜನತಾ ಮತ್ತು ಹುಡ್ಕೋ ಮನೆಗಳನ್ನು ತೆಗೆದು ಕೊಂಡವರ ಸಂಖ್ಯೆ ಎಷ್ಟು ?

ಇ) ಆಯಾ ಗ್ರಾಮಗಳಲ್ಲಿಯ ಮನೆಗಳಲ್ಲಿಯ ಮನೆಗಳು ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ಮತ್ತು ಮನೆಗಳು ಪೂರ್ಣಗೊಂಡು ವಾಸಕ್ಕೆ ಅನುಕೂಲವಾಗಿರುವ ಮನೆಗಳ ವಿವರಗಳನ್ನು ತಿಳಿಸುವುದು?

ಈ) ಈ ಮನೆಗಳನ್ನು ಕಟ್ಟುವುದರಲ್ಲಿ ದುರ್ವ್ಯವಹಾರಗಳ ಪ್ರಕರಣಗಳೇನಾದರೂ ನಡೆದಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವರೇ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು).—

ಅ)

	ಜನತಾ	ಹುಡ್ಕೋ	ಇತರೆ	ಒಟ್ಟು
ಸೇಡಂ	೮೩೪	೧೧೩೮	೪೧೯	೨೬೧೧
ಚಿತ್ತಾಪುರ	೧೬	೨೧೪	೪೨	೩೧೬
ಒಟ್ಟು	೪೫೦	೧೩೫೬	೯೦೧	೩೧೦೭

ಆ) ಸೇಡಂ

೧೯೭೮–೭೯	೬೪	೩೫೫	೨೭೨	೬೯೫
೧೯೭೯–೮೦	೨೨೫	೭೫	೧೦೫	೪೦೫
೧೯೮೦–೮೧	—	೧೪೫	೧೯೪	೩೭೯
೧೯೮೧–೮೨	—	೨೫೦	೪೭೧	೭೨೧
೧೯೮೨–೮೩	—	೨೭೩	೧೪೪	೪೨೧
ಒಟ್ಟು	೨೯೩	೧೧೩೪	೧೧೯೦	೨೬೨೧

ಚಿತ್ತಾಪುರ

೧೯೮೮–೮೯	೧೬	೪೫	೧೦	೭೧
೧೯೮೯–೯೦	—	೬೫	೧೫	೮೦
೧೯೯೦–೯೧	—	೧೫	೧೧	೨೬
೧೯೯೧–೯೨	—	೪೫	೪೬	೯೧
೧೯೯೨–೯೩	—	೪೮	—	೪೮
ಒಟ್ಟು	೧೬	೨೧೪	೪೨	೩೧೬

ಇ) ೨೬೦೪ ಮನೆಗಳು ಪೂರ್ಣವಾಗಿದ್ದು ವಾಸಕ್ಕೆ ಯೋಗ್ಯವಾಗಿದೆ. ಅಪೂರ್ಣವಾಗಿರುವ ೪೦೩ ಮನೆಗಳ ನಿರ್ಮಾಣ ಕಾರ್ಯ ವಿವಿಧ ಹಂತದಲ್ಲಿ ಕೆಳಕಂಡಂತೆ ಇರುತ್ತದೆ.

ತಳಪಾಯ ಹಾಕಿರುವ ಮನೆಗಳು	೧೪
ತಳಪಾಯ ಮುಗಿದಿರುವ ಮನೆಗಳು	೩೯
ಕಿಟಕಿ ಬಾಗಿಲು ಮಟ್ಟಕ್ಕೆ ಬಂದಿರುವ ಮನೆಗಳು	೧೩೯
ಮನೆ ಚಾವಣಿ ಹಂತಕ್ಕೆ ಬಂದಿರುವ ಮನೆಗಳು	೧೭೧
ತಳಪಾಯ ಹಾಕದೇ ಇರುವ ಮನೆಗಳು	೪೦
ಒಟ್ಟು	೪೦೩

ಈ) ಇಲ್ಲ.

ಶ್ರೀ ನಾಗಾರೆಡ್ಡಿ ಲಚಮಾ ರೆಡ್ಡಿ ಪಾಟೀಲ್.—ಉತ್ತರದಲ್ಲಿ ಸಮಂಜಸವಾದ ಉತ್ತರ ಕಾಣುತ್ತಿಲ್ಲ. ಏಕೆಂದರೆ ಕೊನೆಯ ಪ್ರಶ್ನೆ ಅನಾಹುತದ ಬಗ್ಗೆ ಕೇಳಿದರೆ ಇಲ್ಲ ಅಂತ ಉತ್ತರ ಬಂದಿದೆ. ಆದರೆ ಮಾಜಿ ಟಿ.ಡಿ.ಬಿ. ಸದಸ್ಯರೊಬ್ಬರು ದೂರು ಕೊಟ್ಟ ಮೇಲೆ ಜಿಲ್ಲಾಧಿಕಾರಿಗಳು ಅದನ್ನು ವಿಚಾರಣೆ ಮಾಡುವುದಕ್ಕೆ ತಹಸೀಲ್ದಾರ್ ಮತ್ತು ಬಿ.ಡಿ.ಓ.ರವರನ್ನು ನೇಮಿಸಿದ್ದರು. ಅವರು ವಿಚಾರಣೆಯನ್ನು ನಡೆಸಿದ್ದಾರೆ. ಗಾಣಿಗಪುರದಲ್ಲಿ ಕಟ್ಟಿದಂತಹ ೧೮ ಮನೆಗಳು ಬಿದ್ದುಹೋಗಿವೆ. ಆದರೆ ಯಾವುದೇ ಅನಾಹುತವಾಗಿಲ್ಲವೆಂದು ಹೇಳಿದ್ದೀರಿ. ಈ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಮಾಹಿತಿಯನ್ನು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಿಸ್ ಮ್ಯಾನೇಜ್‌ಮೆಂಟ್ ಬಗ್ಗೆ ಅದಕ್ಕೆ ಸಂಬಂಧಪಟ್ಟ ಬಿಡಿಓ ಮತ್ತು ತಹಸೀಲ್ದಾರವರ ವರದಿ ತಂದಿದ್ದಾರೆ. ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಅದನ್ನು ಸರಿಪಡಿಸಿ ಎಂದು.

ಶ್ರೀ ಎ. ಲಕ್ಷ್ಮೀಸಾಗರ್.—ಆ ಗ್ರಾಮದಲ್ಲಿ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ, ಪೂರ್ಣಗೊಂಡಿವೆಯೇ ಮತ್ತು ವಾಸಕ್ಕೆ ಅನುಕೂಲವಾಗುವ ಮನೆಗಳ ವಿವರಗಳನ್ನು ಕೇಳಿದ್ದಾರೆ. ಅದನ್ನು ಕೊಟ್ಟಿದ್ದೇವೆ. ಆದ್ದರಿಂದ ಅವರು ಬೇರೆ ಪ್ರಶ್ನೆ ಕಳುಹಿಸಿದರೆ ಖಂಡಿತವಾಗಿಯೂ ವಿಚಾರಿಸುತ್ತೇನೆ.

ಅಧ್ಯಕ್ಷರು.—ಅವ್ಯವಹಾರ ನಡೆದಿದೆಯೇ ಎಂಬುದಕ್ಕೆ ಉತ್ತರ ಹೇಳಿ.

SRI A. LAKSHMISAGAR.—Sir, according to the report of the Deputy Commissioner of the District, 403 incomplete house are at different stages of construction as given in reply and a list of which has been furnished to the hon. member. The another

aspect of the matter is raised by the hon. Member for which I do not have the information. I will get the same and furnish the hon. member.

ಶ್ರೀ ನಾಗಾರೆಡ್ಡಿ ಲಚಮಾ ರೆಡ್ಡಿ ಪಾಟೀಲ್.—ಜುಲೈ ತಿಂಗಳಲ್ಲಿ ೮೦೦ ಇಂಚು ಮಳೆ ಬಂದಿದೆ. ಅರ್ಧದಲ್ಲಿ ನಿಂತಿರತಕ್ಕಂತಹ ಳಿಂ. ಮನೆಗಳ ಸ್ಥಿತಿ ಏನಾಗಿದೆ ? ಅವುಗಳಲ್ಲಿ ಎಷ್ಟು ಬಿದ್ದುಹೋಗಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಬಹಳ ಜಾಸ್ತಿ ಪ್ರಮಾಣದಲ್ಲಿ ಮನೆಗಳ ಕೆಲಸ ಮುಂದುವರಿದಿದೆ. ಆದಷ್ಟು ಬೇಗ ಹಣವನ್ನು ಒದಗಿಸತಕ್ಕಂತಹ ವ್ಯವಸ್ಥೆ ಮಾಡುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಕಾರ್ಮಿಕರ ಸಂಖ್ಯೆ ಮತ್ತು ಮಂಗಳೂರಿನ ಕಾರ್ಮಿಕ ಕಛೇರಿಯಲ್ಲಿನ ಸಿಬ್ಬಂದಿಗಳ ಸಂಖ್ಯೆ ಹಾಗೂ ಕನಿಷ್ಠ ವೇತನ ಕುರಿತು

೪೦೭ (೮೭೪) ಶ್ರೀ ಪಿ. ರಾಮಚಂದ್ರ ರಾವ್ (ಉಲ್ಲಾಳ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಪಕ್ಷ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣಕ ಕನ್ನಡ ಜಿಲ್ಲೆಯಲ್ಲಿ ವಿವಿಧ ಕಾರ್ಮಿಕ ಕಾನೂನುಗಳನ್ವಯಿಸಲ್ಪಡುವ ಒಟ್ಟು ಕಾಮಿಕರ ಸಂಖ್ಯೆ ಎಷ್ಟು ಮತ್ತು ಮಂಗಳೂರಿನ ಕಾರ್ಮಿಕ ಕಛೇರಿಯಲ್ಲಿ ಇರುವ ವಿವಿಧ ಪಟ್ಟದ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಆ) ಅಸಂಖ್ಯಾತ ಕಾರ್ಮಿಕರು ಇರುವ ಈ ಜಿಲ್ಲೆಯಲ್ಲಿ ಕಾರ್ಮಿಕ ಕಚೇರಿಯ ಸಿಬ್ಬಂದಿಗಳ ಪ್ರಮಾಣವು ಸೂಕ್ತವಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಮತ್ತು ಹಾಗಿದ್ದಲ್ಲಿ ಸರ್ಕಾರದವರ ಲೆಕ್ಕಾಚಾರದ ಪ್ರಕಾರ ಅಲ್ಲಿಯ ಕಾರ್ಮಿಕ ಕಚೇರಿಗೆ ಅಗತ್ಯವಾದ ಸಿಬ್ಬಂದಿ ಎಷ್ಟು ?

ಇ) ಸಿಬ್ಬಂದಿಯ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಕನಿಷ್ಠ ವೇತನಗಳಿಗೆ ಸಂಬಂಧಿಸಿದ ಕಾನೂನುಗಳನ್ನು ವಿವಿಧ ಕೈಗಾರಿಕೆಗಳಲ್ಲಿ ಮತ್ತು ಕೃಷಿಯಲ್ಲಿ ಜಾರಿಗೆ ತರುವುದರಲ್ಲಿ ಅಲ್ಲಿಯ ಕಾರ್ಮಿಕ ಕಚೇರಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸಿಬ್ಬಂದಿಯ ಈ ಕೊರತೆಯನ್ನು ೧೯೬೩–೬೪ನೆಯ ಆರ್ಥಿಕ ವರ್ಷದ ಒಳಗಾಗಿ ತುಂಬುವ ಭರವಸೆಯನ್ನು ಸರ್ಕಾರವು ನೀಡುವುದೇ ?

ಶ್ರೀ ಎಂ. ರಘುಪತಿ (ಕಾರ್ಮಿಕ ಮಂತ್ರಿಗಳ ಪರವಾಗಿ).—

ಅ) ಸುಮಾರು ೪,೮೭,೩೭೨ ಕಾರ್ಮಿಕರು.

೧) ಕಾರ್ಮಿಕಾಧಿಕಾರಿಯವರ ಕಚೇರಿ ಉಪ ವಿಭಾಗ–೧, ಮಂಗಳೂರು ಸಿಬ್ಬಂದಿಗಳು:

ಕಾರ್ಮಿಕಾಧಿಕಾರಿ	—	೧
ಪ್ರಥಮ ದರ್ಜೆ ಗುಮಾಸ್ತ	—	೧
ದ್ವಿತೀಯ ದರ್ಜೆ ಗುಮಾಸ್ತ	—	೧
ಬೆರಳಚ್ಚುಗಾರ	—	೧ (ಖಾಲಿ ಇದೆ)
ಜವಾನರು	—	೨

೨) ಕಾರ್ಮಿಕಾಧಿಕಾರಿಯವರ ಕಚೇರಿ ಉಪ ವಿಭಾಗ–೨, ಮಂಗಳೂರು.

ಕಾರ್ಮಿಕಾಧಿಕಾರಿ	—	೧
ಪ್ರಥಮ ದರ್ಜೆ ಗುಮಾಸ್ತ	—	೧